# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: | 779 (779) |
| ಸದಸ್ಯರ ಹೆಸರು: | ಶ್ರೀ ಕುಶಾಲಪ್ಪ ಎಂ.ಪಿ. (ಸುಜಾ) (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ: | 16.12.2024 |
| ಉತ್ತರಿಸುವವರು: | ಮಾನ್ಯ ಅರಣ್ಯ ಜೀವಿಪರಿಸ್ಥಿತಿ ಮತ್ತು ಪರಿಸರ ಸಚಿವರು |

<table>
<tr><th>ಕ್ರ. ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>2010 ಮತ್ತು 2012ನೇ ಸಾಲಿನಲ್ಲಿ ನೇಮಕ ಹೊಂದಿ ಮುಂಬಡ್ತಿ ಹೊಂದದ ಅರಣ್ಯ ರಕ್ಷಕ (ಪ್ರಸ್ತುತ) ಅರಣ್ಯ ಪಾಲಕ) ಹುದ್ದೆಗಳಿಗೆ ವಿವಿಧ ಜಿಲ್ಲೆಗಳಲ್ಲಿ ಮೂಲ ವೇತನದಲ್ಲಿ ವ್ಯತ್ಯಾಸವಿರಲು ಕಾರಣವೇನು;</td><td>2010 ಮತ್ತು 2012ನೇ ಸಾಲಿನಲ್ಲಿ ನೇಮಕ ಹೊಂದಿ ಮುಂಬಡ್ತಿ ಹೊಂದದ ಅರಣ್ಯ ರಕ್ಷಕ (ಪ್ರಸ್ತುತ ಅರಣ್ಯ ಪಾಲಕ) ಹುದ್ದೆಗಳಿಗೆ ವಿವಿಧ ಜಿಲ್ಲೆಗಳಲ್ಲಿ ಮೂಲ ವೇತನದಲ್ಲಿ ವ್ಯತ್ಯಾಸದ ಕಾರಣಗಳು/ವಿವರಗಳು ಈ ಕೆಳಕಂಡಂತಿದೆ:-
<table>
<tr><th>ಕ್ರ. ಸಂ</th><th>ವೃತ್ತ (ಜಿಲ್ಲೆಗಳು)</th><th>ಉತ್ತರ</th></tr>
<tr><td>1</td><td>ಬಳ್ಳಾರಿ ವೃತ್ತ, ಬೆಳಗಾವಿ ವೃತ್ತ, ಬೆಂಗಳೂರು ವೃತ್ತ, ಚಿಕ್ಕಮಗಳೂರು ವೃತ್ತ, ಹಾಸನ ವೃತ್ತ, ಕಲಬುರ್ಗಿ ವೃತ್ತ, ಕೊಡಗು ವೃತ್ತ, ಮಂಗಳೂರು ವೃತ್ತ, ಮೈಸೂರು ವೃತ್ತ, ಶಿವಮೊಗ್ಗ ವೃತ್ತ, ಕೆನರಾ ವೃತ್ತ,</td><td>ಇಂತಹ ಯಾವುದೇ ಪ್ರಕರಣಗಳು ವರದಿಯಾಗಿರುವುದಿಲ್ಲ</td></tr>
<tr><td>5</td><td>ಚಾಮರಾಜನಗರ ವೃತ್ತ (ಚಾಮರಾಜನಗರ, ಭಾಗಶಃ ಮೈಸೂರು ಜಿಲ್ಲೆ)</td><td>2010 ಮತ್ತು 2012ನೇ ಸಾಲಿನಲ್ಲಿ ನೇಮಕ ಹೊಂದಿರುವ ಎಲ್ಲಾ ಗಸ್ತು ಅರಣ್ಯ ಪಾಲಕರಿಗೆ ಮುಂಬಡ್ತಿ ನೀಡಲಾಗಿದ್ದು, ಒಂದು ಪ್ರಕರಣದಲ್ಲಿ ನೌಕರರ ವಿರುದ್ಧ ಇಲಾಖಾ ವಿಚಾರಣೆ ಬಾಕಿ ಇರುವುದರಿಂದ ಇವರಿಗೆ ವೇತನ ಬಡ್ತಿ ತಡೆಹಿಡಿಯುವ ಜೊತೆಗೆ ಸೇವಾ ಮುಂಬಡ್ತಿ ನೀಡಿರುವುದಿಲ್ಲ.<br>ಆದುದರಿಂದ ಸದರಿಯವರ ಮೂಲ ವೇತನದಲ್ಲಿ ವ್ಯತ್ಯಾಸವಿರುತ್ತದೆ.</td></tr>
<tr><td>6</td><td>ಧಾರವಾಡ ವೃತ್ತ, (ಧಾರವಾಡ, ಹಾವೇರಿ, ಗದಗ ಜಿಲ್ಲೆಗಳು)</td><td>ಸರ್ಕಾರಿ ಆದೇಶ ಸಂಖ್ಯೆ: ಆಇ 36 ಎಸ್‌ಆರ್‌ಪಿ 2018 (ಭಾ-1) ಬೆಂಗಳೂರು</td></tr>
</table>
</td></tr>
</table>

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| | | ದಿನಾಂಕ: 03-08-2022ರ ಪ್ರಕಾರ ಅಧೀನ ಕಚೇರಿಗಳು ಕೆಸಿಎಸ್‌ಆರ್ ನಿಯಮ 43ರನ್ವಯ ವೇತನ ನಿಗದಿಪಡಿಸದೆ ಇರುವುದು ಕಂಡುಬಂದಿರುವ ಪ್ರಯುಕ್ತ ಹೆಚ್ಚುವರಿ ಪಾವತಿಯಾಗಿರುವ ವೇತನವನ್ನು ಅಂತಹ ನೌಕರರಿಂದ ವಸೂಲಿ ಮಾಡಲು ಸಂಬಂಧಿಸಿದ ಅಧೀನ ಕಚೇರಿಗಳಿಂದ ಕ್ರಮ ವಹಿಸಲಾಗಿದೆ. |
| ಆ) | ಸರ್ಕಾರಿ ಆದೇಶ ಸಂಖ್ಯೆ KARNATAKA FOREST DEPARTMENT/HOFF/HRMS/5/2022/PNR ರಂತೆ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲಾ ಅರಣ್ಯ ಇಲಾಖಾ ನೌಕರರಿಗೆ ಮೂಲ ವೇತನ ನಿಗದಿಪಡಿಸದಿರಲು ಕಾರಣವೇನು; (ಸಂಪೂರ್ಣ ವಿವರ ನೀಡುವುದು) | ಸರ್ಕಾರಿ ಆದೇಶ ಸಂಖ್ಯೆ KARNATAKA FOREST DEPARTMENT/HOFF/HRMS/5/2022PNR ರಂತೆ ಉಡುಪಿ ಜಿಲ್ಲೆಗೆ ಸಂಬಂಧಿಸಿದಂತೆ ಯಾವುದೇ ಪ್ರಕರಣಗಳು ಬಾಕಿ ಇರುವುದಿಲ್ಲ. ಮಂಗಳೂರು ಅರಣ್ಯ ವಿಭಾಗದಲ್ಲಿ 02 ಉಪ ವಲಯ ಅರಣ್ಯಾಧಿಕಾರಿ-ಕಂ-ಮೋಜಣಿದಾರರ ಮೂಲ ವೇತನ ನಿಗದಿಪಡಿಸಲು ಬಾಕಿ ಇದ್ದು, ಕಾರಣ ಈ ಕೆಳಗಿನಂತಿರುತ್ತದೆ.<br>• 1ನೇ ಪ್ರಕರಣದಲ್ಲಿ ಶ್ರೀ ಪ್ರಜ್ವಲ್ ಕುಮಾರ್, ಉಪ ವಲಯ ಅರಣ್ಯಾಧಿಕಾರಿ-ಕಂ-ಮೋಜಣಿದಾರರು ಇವರು ಈ ಹಿಂದೆ ಕರ್ತವ್ಯ ನಿರ್ವಹಿಸುತ್ತಿದ್ದ ಸಿದ್ದಾಪುರ ವನ್ಯಜೀವಿ ವಲಯದಲ್ಲಿ ಗೈರುಹಾಜರಾಗಿದ್ದು, ಪ್ರಸ್ತುತ ವೇತನ ನಿಗದಿಪಡಿಸಲು ಕ್ರಮವಹಿಸಲಾಗುತ್ತಿದೆ.<br>• 2ನೇ ಪ್ರಕರಣದಲ್ಲಿ ಶ್ರೀ ಮನೋಹರ ಕೆ., ಉಪ ವಲಯ ಅರಣ್ಯಾಧಿಕಾರಿ-ಕಂ-ಮೋಜಣಿದಾರರು ಇವರು ಈ ಹಿಂದೆ ಮುಂಡ್ರೋಟು ವಲಯದಲ್ಲಿ ಕರ್ತವ್ಯ ನಿರ್ವಹಿಸಿದ ಅವಧಿಯಲ್ಲಿ ಗೈರು ಹಾಜರಿಯಾಗಿರುವುದರಿಂದ ಪ್ರಸ್ತುತ HRMS ತಂತ್ರಾಂಶದಲ್ಲಿ ಸದರಿ ಗೈರುಹಾಜರಾದ ಅವಧಿಯಿಂದ ಮೂಲ ವೇತನವನ್ನು ನಿಗದಿಪಡಿಸಲು ಕ್ರಮ ಕೈಗೊಂಡಿದ್ದು, ತಾಂತ್ರಿಕ ದೋಷದ ಕಾರಣದಿಂದ ಸದರಿ ಮೂಲ ವೇತನವನ್ನು ನಿಗದಿಪಡಿಸುವ ಪ್ರಕ್ರಿಯೆ ಚಾಲ್ತಿಯಲ್ಲಿರುತ್ತದೆ. |

**ಸಂಖ್ಯೆ: ಎಫ್‌ಇಇ 221 ಎಫ್‌ಎನ್‌ಜಿ 2024**

**(ಈಶ್ವರ ಬಿ. ಖಂಡ್ರೆ)**
**ಅರಣ್ಯ, ಜೀವಿಪರಿಸ್ಥಿತಿ ಮತ್ತು ಪರಿಸರ ಸಚಿವರು.**